## ಅನುಬಂಧ

**<u>ನೀತಿ ಆಯೋಗದಡಿ ಪ್ರಾರಂಭಿಸಲಾಗುತ್ತಿರುವ ಅಟಲ್ ಟಿಂಕರಿಂಗ್ ಪ್ರಯೋಗಾಲಯಗಳ ಸ್ಥಾಪನೆಗೆ ಅರ್ಜಿ ಸಲ್ಲಿಸಲು ಗಮನಿಸಬೇಕಾಗದ ಅಗತ್ಯ ಮಾಹಿತಿಗಳು:</u>**

1. ಯೋಜನೆಯ ಪರಿಷ್ಕೃತ ಮಾರ್ಗಸೂಚಿಯನ್ನು http:\\niti.gov.in ವಿಳಾಸದಿಂದ ಪಡೆಯುವುದು.
2. ಮಾರ್ಗಸೂಚಿಯಲ್ಲಿನ ಅನುಬಂಧ ರಲ್ಲಿನ ಅಂಶಗಳನ್ನು ಪರಿಶೀಲಿಸಿ ಅರ್ಜಿ ನಮೂನೆ ಅನುಬಂಧ–2 ರಲ್ಲಿ ನೀಡಿದ್ದು, ಅದನ್ನು ಭರ್ತಿ ಮಾಡಿ ದಿನಾಂಕ:31–01–2019 ರೊಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು.
3. ಸ್ಪರ್ಧಾತ್ಮಕ ರೀತಿಯಲ್ಲಿ ಶಾಲೆಗಳನ್ನು ಆಯ್ಕೆ ಮಾಡುವುದರಿಂದ ಅರ್ಜಿ ಭರ್ತಿ ಮಾಡುವ ಮುನ್ನ ಈ ಕೆಳಕಂಡ ಅಂಶಗಳು ಇರುವಂತೆ ನೋಡಿಕೊಂಡು ಆಂಗ್ಲ ಭಾಷೆಯಲ್ಲಿ ಸಿದ್ದಪಡಿಸಿ ಅರ್ಜಿ ಸಲ್ಲಿಸುವುದು.

   a) ಈ ಆಯ್ಕೆಗೆ ನಿಮ್ಮ ಶಾಲಾ ಮೂಲಭೂತ ಸೌಕರ್ಯಗಳು (ಅಟಲ್ ಟಿಂಕರಿಂಗ್ ಪ್ರಯೋಗಾಲಯಕ್ಕಾಗಿ 1500 ಚ.ಅ ನಿವೇಶನ, ಕಾರ್ಯನಿರತ ಅಂತರ್ಜಾಲ ಸೌಲಭ್ಯ ಹೊಂದಿದ ಗಣಕಯಂತ್ರ, ವಿದ್ಯುತ್ ಸಂಪರ್ಕ ಇರುವ), ಗಣಿತ ಮತ್ತು ವಿಜ್ಞಾನ ವಿಷಯಗಳ ಬೋಧಕ ಸಿಬ್ಬಂದಿಯ ಅರ್ಪಣಾ ಮನೋಭಾವ ಹಾಗೂ ವಿದ್ಯಾರ್ಹತೆ, 06 ರಿಂದ 10ನೇ ತರಗತಿಯವರಗಿನ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ ಕನಿಷ್ಠ 200, ಹಾಜರಾತಿ ಶೇ.75 ಕ್ಕಿಂತ ಹೆಚ್ಚಿರುವ ಶಾಲೆಗಳನ್ನು ಆಯ್ಕೆಗೆ ಪರಿಗಣಿಸಲಾಗುತ್ತಿದೆ. ಇದರೊಂದಿಗೆ ಹಿಂದಿನ 03 ವರ್ಷಗಳ ವಿದ್ಯಾರ್ಥಿಗಳ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಮತ್ತು 70% ಕ್ಕಿಂತ ಹೆಚ್ಚು ಅಂಕಪಡೆದಿರುವ ವಿದ್ಯಾರ್ಥಿಗಳ ಶೇಕಡವಾರು, ಜಿಲ್ಲಾ, ರಾಜ್ಯ, ರಾಷ್ಟ್ರಮಟ್ಟದಲ್ಲಿ ವಿಜ್ಞಾನ ಸಂಬಂಧಿತ ಚಟುವಟಿಕೆಗಳಲ್ಲಿ ಭಾಗವಹಿಸಿರುವ ಬಗ್ಗೆ, ಅಟಲ್ ಟಿಂಕರಿಂಗ್ ಪ್ರಯೋಗಾಲಯದ ಚಟುವಟಿಕಾ ಯೋಜನೆ, ಮೆಂಟರ್‌ಗಳೊಂದಿಗೆ ಜೋಡಣೆ, ಈ ಪ್ರಯೋಗಾಲಯ ನಿರ್ವಹಣೆಗೆ ಖಾಸಗಿ ಸಹಭಾಗಿತ್ವ ಸಹಕಾರ ಪಡೆಯುವ ಯೋಜನೆ, ಈ ಪ್ರಯೋಗಾಲಯದಿಂದ ಮಕ್ಕಳ ಕಲಿಕಾ ಪ್ರಕ್ರಿಯೆಯಲ್ಲಿ ಆಗಬಹುದಾದ ಮಾಹಿತಿಯನ್ನು ಒದಗಿಸಬೇಕಾಗುತ್ತದೆ.

ಯೋಜನೆಯ ವಿವರ ಅನುಷ್ಠಾನ ಮಾರ್ಗಸೂಚಿಗಳಿಗಾಗಿ http:\\niti.gov.in\content\atal-tinkering-laboratories ವೆಬ್‌ಸೈಟ್‌ನ್ನು ನೋಡಬಹುದು. ಇನ್ನೂ ಹೆಚ್ಚಿನ ಮಾಹಿತಿ ಸಮಸ್ಯೆಗಳ ಸ್ಪಷ್ಟೀಕರಣಕ್ಕೆ <u>md-aim@gov.in</u> (Phone No. 011-23096607/23092291) ನ್ನು ಸಂಪರ್ಕಿಸುವುದು.